**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ**

**ಜೆ.ಎಂ.ಎಫ್.ಸಿ., ನ್ಯಾಯಾಲಯ, ಹಾವೇರಿ.**

**ಸಿ.ಸಿ. ನಂ. 158/2023**

ಡಿ.ಡಬ್ಲ್ಯೂ- 1

| | |
|---|---|
| ಹೆಸರು | : ವೆಂಕಟೇಶ ರಾಮಚಂದ್ರ ಇಟಗಿ |
| ತಂದೆಯ ಹೆಸರು | ಃರಾಮಚಂದ್ರ |
| ವಯಸ್ಸು | : 46 ವರ್ಷ |
| ಉದ್ಯೋಗ | ಃಕೇಬಲ ಆಪರೇಟರ |
| ವಾಸಸ್ಥಳ | : ನಾಗೇಂದ್ರನಮಟ್ಟಿ, ಹಾವೇರಿ |

**ದಿನಾಂಕಃ 19-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃಶ್ರೀ ಪಿ.ಎನ್.ಎ., ಆರೋಪಿ ಪರ ವಕೀಲರಿಂದಃ**

ನಾನು ಹಾವೇರಿಯ ನಾಗೇಂದ್ರನಮಟ್ಟಿಯಲ್ಲಿ ಕೇಬಲ ಆಪರೇಟರಾಗಿ ಸುಮಾರು ವರ್ಷಗಳಿಂದ ಕೆಲಸ ನಿರ್ವಹಿಸುತ್ತಾ ಬಂದಿರುತ್ತೇನೆ. ನಾನು ಚಂದ್ರಶೇಖರ ಹತ್ತಿಯವರಿಂದ ತಿಂಗಳದ ಕೊನೆಯಲ್ಲಿ ಹಣದ ಅವಶ್ಯಕತೆ ಬಿದ್ದಾಗ ಹಣದ ಭದ್ರತೆಗಾಗಿ ಚೆಕ್ ನೀಡಿ ಹಣವನ್ನು ಪಡೆಯುತ್ತಿದ್ದು, ಹಣವನ್ನು ಮರು ಪಾವತಿ ಮಾಡುವ ಸಮಯದಲ್ಲಿ ಚೆಕ್‌ನ್ನು ವಾಪಸ್ಸ ಪಡೆಯುತ್ತಿದ್ದೆ. 2013 ರಲ್ಲಿ ನನಗೆ ಹಣದ ಅವಶ್ಯಕತೆ ಇದ್ದುದ್ದರಿಂದ ಪ್ರದ್ರಿ ಚಂದ್ರಶೇಖರ ಹತ್ತಿಯವರ ಬಳಿ ರೂ. 1,00,000/- ಹಣವನ್ನು ಪಡೆದಿದ್ದು ಭದ್ರತೆಗಾಗಿ ಹೆಚ್ ಡಿ ಎಫ್ ಸಿ ಬ್ಯಾಂಕಿನ ಎರಡು ಚೆಕ್‌ಗಳಿಗೆ ಸಹಿ ಮಾಡಿ ಮತ್ತು ಅವುಗಳನ್ನು ಹಾಗೂ ಚೆಕ್ ಬುಕ್‌ನ್ನು ಕೊಟ್ಟಿದ್ದೆ. ಸಿ.ಎಸ್. ಹತ್ತಿಯವರು ಹಣ ಮರು ಪಾವತಿ ಮಾಡುವಂತೆ ಒತ್ತಾಯ ಮಾಡಿದ್ದರಿಂದ, ಮನೆ ಮಾರಾಟ ಮಾಡಿ

ಹಣವನ್ನು ಮರು ಪಾವತಿ ಮಾಡಿರುತ್ತೇನೆ. ನಂತರ ಚೆಕ್‌ನ್ನು ವಾಪಸ್ಸ ಕೇಳಿದಾಗ ಸದ್ರಿ ಸಿ.ಎಸ್. ಹತ್ತಿಯವರು ಚೆಕ್‌ಗಳು ನನ್ನ ಅತ್ತೆಯವರ ಕಡೆ ಇದೆ, ನನ್ನ ಮತ್ತು ನನ್ನ ಅತ್ತೆಯ ನಡುವೆ ವ್ಯಾಜ್ಯ ಇದೆ, ಸದ್ರಿ ವ್ಯಾಜ್ಯ ಮುಗಿದ ನಂತರ ಕೊಡುತ್ತೇನೆ ಎಂದು ಹೇಳಿದ್ದರು. ಆಗಾಗ ಅವರನ್ನು ಕೇಳಿದಾಗ ಚೆಕ್‌ಗಳನ್ನು ವಾಪಸ್ಸ ಕೊಡುತ್ತೇನೆಂದು ಭರವಸೆ ನೀಡಿದ್ದರು. 2018 ರಲ್ಲಿ ಕೊನೆಯದಾಗಿ ಚೆಕ್‌ಗಳನ್ನು ವಾಪಸ್ಸ ಕೊಡುವಂತೆ ಕೇಳಿದಾಗ ಚೆಕ್ ಮಿಸ್ ಆಗಿದೆ ಹುಡುಕುತ್ತೇನೆ ಎಂದು ಹೇಳಿದ್ದರು.

**2.** ದಿನಾಂಕಃ 30-09-2019 ರಂದು ಕೋರ್ಟನಿಂದ ನನಗೆ ಸಮನ್ಸ ಬಂದಿದ್ದು ತೆಗೆದು ನೋಡಿದಾಗ ಸತೀಶ ಕಲ್ಮನಿ ಎನ್ನುವವರು ನನ್ನ ಮೇಲೆ ಕೇಸ ಹಾಕಿರುವುದು ತಿಳಿದು ಬಂದಿತ್ತು. ನಂತರ ಸತೀಶ ಕಲ್ಮನಿ ಎನ್ನುವವರು ಯಾರು ಎಂದು ಜನರಿಗೆ ಕೇಳಿ ನೋಡಲಾಗಿ ಸದ್ರಿಯವರು ವಿದ್ಯಾನಗರದ ನಿವಾಸಿಯೆಂದು ತಿಳಿದು ಬಂದಿತ್ತು. ಅವರ ಮನೆಗೆ ತೆರಳಿ ಅವರನ್ನು ಭೇಟಿಯಾಗಿ ಕೇಳಲಾಗಿ ಸತೀಶ ಕಲ್ಮನಿಯವರು ನಾನು ಮಾಡಿದ್ದಲ್ಲ ನನ್ನ ಸಂಬಂಧಿ ಹತ್ತಿಯವರು ಮಾಡಿದ್ದು ಅಂತಾ ಹೇಳಿದರು. ನಾನು ಸದ್ರಿ ಹತ್ತಿಯವರನ್ನು ಭೇಟಿಯಾಗಿ ನಾನು ಕೊಡುವ ಹಣವನ್ನು ಕೊಟ್ಟಿದ್ದಾಗ್ಯೂ ಕೂಡಾ ಬೇರೆಯವರಿಂದ ಸುಳ್ಳು ಪ್ರಕರಣ ದಾಖಲು ಮಾಡಿಸಿರುತ್ತೀರಿ ಏಕೆ ಎಂದು ಕೇಳಿದಾಗ ಸುಮ್ಮನೆ ಮನಸ್ಸಿಗೆ ಬಂದ ರೀತಿ ಮಾಡಿದ್ದೇನೆ, ನಿಮ್ಮ ಚೆಕ್‌ನ್ನು ವಾಪಸ್ಸು ಕೊಡುತ್ತೇನೆ, ಪ್ರಕರಣವನ್ನು 2-3 ದಿನಗಳಲ್ಲಿ ವಾಪಸ್ಸ ತೆಗದುಕೊಳ್ಳುತ್ತೇನೆ ಎಂದು ಹೇಳಿದ್ದರು. ಮತ್ತೆ ನಾನು ಅವರಿಗೆ ಪೋನ ಮಾಡಿದಾಗ ಅವರು ನಾಳೆ ತೆಗೆಸುತ್ತೇನೆ ಎಂದು ಹೇಳಿದ್ದರು. ದಿನಾಂಕಃ 02-10-2019 ರಂದು ನಾನು ಸಿ ಎಸ್ ಹತ್ತಿಯವರ ಬಳಿ ಚೆಕ್‌ನ್ನು ವಾಪಸ್ಸ ಕೇಳಲು ಹೋಗುತ್ತಿದ್ದಾಗ ಹೊಸಮಠದ ಹತ್ತಿರ ಸಿ ಎಸ್ ಹತ್ತಿ ಮತ್ತು ಸತೀಶ ಕಲ್ಮನಿ ಮಾತನಾಡುತ್ತಿದ್ದರು. ನನ್ನೊಂದಿಗೆ ಇದ್ದ ಪರಶುರಾಮ ರಾಜಪ್ಪನವರ ಇಲ್ಲಿಯೇ ಹತ್ತಿಯವರು ಇದ್ದಾರೆ ಎಂದು ಹೇಳಿದರು. ನಾನು ಗಾಡಿಯಿಂದ ಇಳಿದು ಸದ್ರಿ ಹತ್ತಿರಯವರ ಬಳಿ ಹೋಗಿ ಚೆಕ್ ವಾಪಸ್ಸ ಕೊಡುತ್ತೇನೆ ಮತ್ತು ಪ್ರಕರಣ ವಾಪಸ್ಸ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದೀರಿ ಯಾಕೆ ಇನ್ನು

ಮಾಡಿಲ್ಲ ಎಂದು ಕೇಳಿದಾಗ ಏಕಾಏಕಿ ನನಗೆ ಅವಾಚ್ಯ ಶಬ್ದಗಳಿಂದ ಬೈದು, ಗಲಾಟೆ ಮಾಡಿದ್ದರು. ನನಗೆ ಅವಮಾನವಾಗಿದ್ದರಿಂದ ನಾನು ಅಲ್ಲಿಂದ ಹೋದೆ.

**3.** ದಿನಾಂಕಃ 03-10-2019 ರಂದು ಪೋಲಿಸ ಠಾಣೆಗೆ ಹೋಗಿ ನಾನು ದೂರನ್ನು ಕೊಟ್ಟಿರುತ್ತೇನೆ. ಸದ್ರಿ ಪ್ರಕರಣವು ನ್ಯಾಯಾಲಯದಲ್ಲಿ ತೀರ್ಮಾನವಾಗಿ, ಆರೋಪಿತರು ಬಿಡುಗಡೆ ಹೊಂದಿದ್ದು, ಸದ್ರಿ ಆದೇಶದ ವಿರುದ್ಧ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ. ನನ್ನ ವಕೀಲರ ಮೂಲಕ ಈ ಪ್ರಕರಣದಲ್ಲಿ ಹಾಜರುಪಡಿಸಿರುವ ಚೆಕ್‌ನ್ನು ಪರಿಶೀಲಿಸಿ ನೋಡಿದಾಗ ಸದ್ರಿ ಚೆಕ್‌ನಲ್ಲಿ ನನ್ನ ಸಹಿಯನ್ನು ಹೊರತುಪಡಿಸಿ ಉಳಿದ ಬರವಣಿಗೆಯು ಪಿ ಎನ್ ಬೆನ್ನೂರ ವಕೀಲರ ಕೈ ಬರವಣಿಗೆಯಲ್ಲಿ ಇರುವುದು ಕಂಡು ಬರುತ್ತದೆ. ನಂತರ ಸತೀಶ ಕಲ್ಮನಿಯವರು ನನಗೆ ಮನೆ ಕಟ್ಟಲು ಸಾಲ ಕೊಟ್ಟಿರುವುದಾಗಿ ಹೇಳಿರುವುದು ಸುಳ್ಳು ಇರುತ್ತದೆ. ನನಗೆ ಮನೆ ಕಟ್ಟಲು ಹಾವೇರಿ ಆಶ್ರಯ ಯೋಜನೆಯಲ್ಲಿ ಮನೆ ಮಂಜೂರು ಆದೇಶದ ಪ್ರತಿಯನ್ನು ಲಗತ್ತಿಸಿರುತ್ತೇನೆ. ಸತೀಶ ಕಲ್ಮನಿಯವರು ನನ್ನೊಂದಿಗೆ ಹೊಸಮಠ ಕಾಲೇಜನಲ್ಲಿ ಓದಿರುತ್ತಾರೆ ಎಂಬುದು ಸುಳ್ಳು, ಅದಕ್ಕೆ ಸಂಬಂಧಪಟ್ಟ ಸತೀಶ ಕಲ್ಮನಿಯವರ ಹೆಸರುಳ್ಳ ದೃಢೀಕೃತ ನಕಲು ಪ್ರತಿಯನ್ನು ಲಗತ್ತ ಮಾಡಿರುತ್ತೇನೆ. ನಾನು ಸಂಪತ್ತ ಕಿಚಡಿಯವರಿಗೆ ಮನೆ ಮಾರಾಟ ಮಾಡಿದ ಖರೀದಿ ಕಾಗದ ಪತ್ರದ ದೃಢೀಕೃತ ನಕಲು ಪ್ರತಿಯನ್ನು ಹಾಜರುಪಡಿಸಿರುತ್ತೇನೆ.

ಹಾವೇರಿ ಟೌನ್ ಪೋಲಿಸ ಠಾಣೆಯ ಅಪರಾದ ಸಂಖ್ಯೆಃ 68/2019 ಕ್ಕೆ ಸಂಬಂಧಿಸಿದ ಅಂತಿಮ ವರದಿ ಮತ್ತು ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ **ನಿಡಿ-3** ಎಂದು, ಸದ್ರಿ ಪ್ರಕರಣದಲ್ಲಿ ನನ್ನ ಹೇಳಿಕೆಯ ದೃಢೀಕೃತ ನಕಲನ್ನು **ನಿಡಿ-4** ಎಂದು, ಸ್ಪೆಷಲ್ ಎಸ್.ಸಿ/ಎಸ್.ಟಿ. ಸಂಖ್ಯೆಃ 03/2020 ರಲ್ಲಿ ನಾನು ನೀಡಿರುವ ಸಾಕ್ಷ್ಯ ವಿಚಾರಣೆ ಮತ್ತು ಇತರ ಸಾಕ್ಷಿದಾರರು ನೀಡಿರುವ ಸಾಕ್ಷ್ಯ ವಿಚಾರಣೆಯ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು

ಒಟ್ಟಾಗಿ **ನಿಡಿ–5** ಎಂದು, 1997–1998 ನೇ ಸಾಲಿನ ಎಸ್.ಜೆ.ಎಂ. ಪದವಿ ಪೂರ್ವ ಕಾಲೇಜ ವಿದ್ಯಾರ್ಥಿಗಳ ಪಟ್ಟಿಯ ದೃಢೀಕೃತ ನಕಲನ್ನು **ನಿಡಿ–6** ಎಂದು, ಈ ಪ್ರಕರಣದಲ್ಲ ಪಿರ್ಯಾದಿದಾರರ ಪರ ವಕೀಲರು ಸಲ್ಲಿಸಿರುವ ವಕಾಲತ್ತನ ದೃಢೀಕೃತ ನಕಲನ್ನು **ನಿಡಿ–7** ಎಂದು, ಈ ಪ್ರಕರಣದಲ್ಲಿ ಪಿರ್ಯಾದಿದಾರರ ಪರ ವಕೀಲರು ದಿನಾಂಕಃ 16–02–2021 ರಂದು ಸಲ್ಲಿಸಿರುವ ಕಾಪಿ ಅಪ್ಲಿಕೇಶನ ದೃಢೀಕೃತ ನಕಲನ್ನು **ನಿಡಿ–8** ಎಂದು, ದಿನಾಂಕಃ 21–11–2019 ರಂದು ಸಲ್ಲಿಸಿರುವ ಕಾಪಿ ಅಪ್ಲಿಕೇಶನ ದೃಢೀಕೃತ ನಕಲನ್ನು **ನಿಡಿ–9** ಎಂದು, ನನ್ನ ಮನೆ ಮಾರಾಟ ಮಾಡಿದ ಬಗ್ಗೆ ನಾನು ಬರೆದುಕೊಟ್ಟಿರುವ ಒಪ್ಪಂದ ಕರಾರು ಪತ್ರ ಹಾಜರುಪಡಿಸಿದ್ದು ಸದ್ರಿ ಕರಾರು ಪತ್ರವನ್ನು ತಕರಾರಿಗೆ ಒಳಪಟ್ಟು **ನಿಡಿ–10** ಎಂದು, ಗುರುತಿಸಲಾಯಿತು. ಸ್ಪೆಷಲ್ ಎಸ್.ಸಿ/ಎಸ್.ಟಿ. ಸಂಖ್ಯೆ 03/2020 ರಲ್ಲಿ 1 ನೇ ಆರೋಪಿಯ ಪರ ವಕೀಲರು ಸಲ್ಲಿಸಿದ್ದ ಸೆಕ್ಷನ್ 317 ಸಿ ಆರ್ ಪಿ ಸಿ ರಡಿಯಲ್ಲಿ ಸಲ್ಲಿಸಿರುವ ಅಪ್ಲಿಕೇಶನ ದೃಢೀಕೃತ ನಕಲನ್ನು **ನಿಡಿ–11** ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

–ಸಹಿ–

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.